## <u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ. **1343/2023**

ಪಿ.ಡಬ್ಲ್ಯೂ-**1**

ಸಿ.ಡಬ್ಲ್ಯೂ-**1**

ಸಾಕ್ಷಿದಾರರ ಹೆಸರು ಃ ಶ್ವೇತಾ

ಗಂಡನ ಹೆಸರು ಃ ತಿಪ್ಪೇಸ್ವಾಮಿ

ವಯಸ್ಸು ಃ **30** ವರ್ಷ

ಕೆಲಸ ಃ ಗೃಹಿಣಿ

ವಾಸ ಸ್ಥಳ ಃ ಕುರೂಡಿ

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ **28-04-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ಮೃತ ತಿಪ್ಪೇಸ್ವಾಮಿ ನನ್ನ ಗಂಡ. ಸಾಕ್ಷಿಗೆ ದಿಃ **27.09.2023** ರ ದೂರನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-**1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**1** ಎ ಎಂದು ಗುರುತಿಸಲಾಯಿತು. ನಿಪಿ-**1** ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಸಾಕ್ಷಿಗೆ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ, ಅದನ್ನು ನಿಪಿ-**2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ದಿನಾಂಕಃ **27.09.2023** ರಂದು ಬೆಳಿಗ್ಗೆ **8.00** ಗಂಟೆಗೆ ನನ್ನ ಗಂಡ ಆರೋಪಿ-**1** ರವರ ಜಮೀನಿಗೆ ಪೈಪ್ ಲೈನ್ ಹಾಕಿಸಿಕೊಳ್ಳಲು ಅಳತೆ ಮಾಡಿಕೊಳ್ಳಲು ಹೋಗಿದ್ದು, ಆರೋಪಿ ತನ್ನ

ಜಮೀನಿನಲ್ಲಿ ಕಲ್ಲು ಕುಚ್ಚಗಳಿಗೆ ಹಾಕಿಸಿದ್ದ ಕಾಂಪೌಡ್ ತಂತಿ ನನ್ನ ಗಂಡನಿಗೆ ತಗುಲಿ ಒದ್ದಾಡುತ್ತಿದ್ದನ್ನು ನೋಡಿ ಆರೋಪಿಯ ಮಗನಾದ ಅಂಬರೀಷ್ ನನ್ನ ಗಂಡನನ್ನು ಹಿಡಿದುಕೊಂಡು ನನ್ನ ಗಂಡ ಹಾಗೂ ಅಂಬರೀಷ್ ಇಬ್ಬರು ವಿದ್ಯುತ್ ಸಂಪರ್ಕದಿಂದ ಮೃತರಾದರು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ವಿದ್ಯುತ್ ಸಂಪರ್ಕವನ್ನು **BESCOM** ಇಂದ ಪಡೆಯದೇ ಜಮೀನಿನ ಸುತ್ತಲು ಹಾಕಿರುವ ತಂತಿಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ತಂತಿ ಬೇಲಿಗೆ ಹಾಕಿದ್ದು, ಅದನ್ನು ಗಮನಿಸದೇ ನನ್ನ ಗಂಡ ಹಾಗೂ ಆರೋಪಿತನ ಮಗ ಅಂಬರೀಷ್ ಇಬ್ಬರೂ ವಿದ್ಯುತ್ ಸಂಪರ್ಕಸಿ ಮೃತರಾದರು ಎಂದರೆ ಸರಿಯಲ್ಲ. ಆ ರೀತಿ ನಾನು ನಿಪಿ-1 ರಂತೆ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸರು ಸ್ಥಳಕ್ಕೆ ಬಂದು ಒಂದು **fiber glass** ಹೆಸರಿನ ಅಳತೆ ಮಾಡುವ **tape roll** ಅನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. **fiber glass** ಹೆಸರಿನ ಅಳತೆ ಮಾಡುವ **tape roll** ಅನ್ನು ಮುದ್ದೇ ಮಾಲು-1 ಎಂದು ಗುರುತಿಸಲಾಯಿತು. (ನ್ಯಾಯಾಲಯದ ಅನುಕೂಲಕ್ಕಾಗಿ). ಅದೇ ದಿನ ಪೊಲೀಸರು ಸಮಯ **3.45** ರಿಂದ **4.45** ರಲ್ಲಿ ಪಂಚನಾಮೆಯನ್ನು ಬರೆದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಹಾಗೂ ಮುಮಾ-1 ಅದನ್ನು ನೋಡಿ ಗುರುತಿಸಿರುವುದಿಲ್ಲ. ಆರೋಪಿತರ ಜೊತೆ ರಾಜಿ ಮಾಡಿಕೊಂಡು ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಾ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ . ಆರ್.ವಿ.ಜಿ. ಆರೋಪಿ ಪರ ವಕೀಲರಿಂದಃ ಇಲ್ಲ.</u>

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು